ಆ) ಮುಂಡರಗಿ ತಾಲ್ಲೂಕ್ ಕಕ್ಕೂರ ಏತ ನೀರಾವರಿಯ 2ನೇ ಹಂತದ ಪ್ರಾರಂಭಕ್ಕೆ ವಿಳಂಬವಾಗಲು ಕಾರಣಗಳೇನು;

ಇ) ಮುಂಡರಗಿ ತಾಲ್ಲೂಕು ತಾಮ್ರಗುಂಡಿ ನೀರಾವರಿ ಕೆರೆ ಮೊನ್ನೆ ಮಹಾಪೂರದಲ್ಲಿ ಒಡೆದಿದ್ದು ಅದರ ದುರಸ್ತಿಗಾಗಿ ಬಜೆಟ್‌ನಲ್ಲಿ ಹಣವಿದ್ದರೂ ಇಲ್ಲಿಯವರೆಗೆ ಏಕೆ ದುರಸ್ತಿ ಕೆಲಸವು ಪ್ರಾರಂಭವಾಗಿಲ್ಲ ಮತ್ತು ಆಲ್ಲಿಯ ರೈತರು ಸತ್ಯಾಗ್ರಹ ಮಾಡಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಬಂದಿದ್ದರೆ, ನಿಮ್ಮ ಅಧಿಕಾರಿಗಳು ಮಾರ್ಚ್ 1993ರ ಒಳಗಾಗಿ ಪೂರ್ತಿ ಕೆರೆ ರಿಪೇರಿ ಮಾಡುವ ಆಶ್ವಾಸನೆ ಕೊಟ್ಟಿದ್ದರೂ ಅದು ಇದುವರೆಗೆ ಕಾರ್ಯಗತವಾಗಿಲ್ಲದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಈ ಯೋಜನೆಯ 1 ಮತ್ತು 2 ನೇ ಹಂತದ ಸಮಗ್ರ ಪರಿಷ್ಕೃತ ಅಂದಾಜು ಪಟ್ಟಿ ತಯಾರಾಗುತ್ತಿದೆ. ಯೋಜನೆಯು ಆಯವ್ಯಯ ಪಟ್ಟಿಯಲ್ಲಿ ಸೇರಿದ ನಂತರ ಮತ್ತು ಪರಿಷ್ಕೃತ ಅಂದಾಜಿಗ ಆಡಳಿತಾತ್ಮಕ ಅನುಮೋದನೆ ದೊರೆತ ಮೇಲೆ 2ನೇ ಹಂತವನ್ನು ಕೈಗೊಳ್ಳಬಹುದು.

ಆ) ಈ ಯೋಜನೆಯನ್ನು ಈಗಾಗಲೇ ಡಿ.ಪಿ.ಎ.ಪಿ. ಅಡಿಯಲ್ಲಿ ತೆಗೆದುಕೊಂಡಿದೆ ಮತ್ತು ಆ ಶೀರ್ಷಿಕೆಯಲ್ಲಿ ಅನುದಾನ ಒದಗುತ್ತಿಲ್ಲವಾದ್ದರಿಂದ ಕೆಲಸ ಸ್ಥಗಿತಗೊಂಡಿದೆ.

ಇ) ಹೌದು. ಅಂದಾಜು ಪಟ್ಟಿ ಈಗ ಸರ್ಕಾರಕ್ಕೆ ಬಂದಿದ್ದು ಶೀಘ್ರದಲ್ಲಿ ಮಂಜೂರಾತಿ ನೀಡಲು ಮತ್ತು ಕೆಲಸ ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ತುಂಗಭದ್ರಾ ಹೊಳೆಗೆ ಸಿಂಗಟಾಲೂರ ಬ್ರಿಡ್ಜ್

2192: ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಭದ್ರಾ ಹೊಳೆಗೆ ಸಿಂಗಟಾಲೂರು ಬ್ರಿಡ್ಜ್ ಕಂ ಬ್ಯಾರೇಜ್ ಮಂಜೂರು ಆಗಿದ್ದರೂ ಇಲ್ಲಿಯವರೆಗೂ ಕಾರ್ಯ ಪ್ರಾರಂಭವಾಗಿಲ್ಲದಿರಲು ಕಾರಣಗಳು ಏನು;

ಆ) ಎಂದಿನಿಂದ ಕಾರ್ಯ ಪ್ರಾರಂಭವಾಗುವುದು ಹಾಗೂ ಪೂರ್ಣಗೊಳಿಸುವ ನಿರ್ದಿಷ್ಟ ದಿನಾಂಕವನ್ನು ಕೊಡುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಸಿಂಗಟಾಲೂರು ಬಳಿ ತುಂಗಭದ್ರಾ ನದಿಗೆ ಬ್ರಿಜ್ಡ್ ಕೆಮ್ ಬ್ಯಾರೇಜನ್ನು ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ. ಆದರೆ ಬ್ಯಾರೇಜನ್ನು ನಿರ್ಮಿಸಿ ಏತ ನೀರಾವರಿ ಸೌಲಭ್ಯ ಒದಗಿಸುವ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿಯನ್ನು 19-9-92ರಲ್ಲಿ ನೀಡಲಾಗಿದೆ.

ಆ) ಸದರಿ ಯೋಜನೆಗೆ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆದು ನಂತರ ಒಪ್ಪಿಗೆಗಾಗಿ ಕೇಂದ್ರ ಜಲ ಆಯೋಗಕ್ಕೆ ಕಳುಹಿಸಿ ಕೊಡಲಾಗುವುದು ಹಾಗೂ ಈ ಆಯೋಗದ ಒಪ್ಪಿಗೆ ದೊರೆತ ನಂತರ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.